# ಹೌದು ಕಣೆ ಉಷಾ...

■ ಗೌರಿ



‘ಹೌದು ಕಣೆ ಉಷಾ
ನಾವು ಹುಡುಗಿಯರೇ ಹೀಗೆ...
ಏನೇನೋ ವಟಗುಟ್ಟಿದರೂ
ಹೇಳಲೇಬೇಕಾದ್ದನ್ನು ಹೇಳದೆ
ಏನೇನೆಲ್ಲಾ ಅನುಭವಿಸಿ ಸಾಯುತ್ತೇವೆ

ಜುಮ್ಮೆನ್ನಿಸುವ ಆಲೋಚನೆಗಳನೆಲ್ಲಾ
ಹಾಗೆ ಡಬ್ಬಿಯೊಳಗೆ ಹಿಟ್ಟು ಒತ್ತಿದಂತೆ
ಒತ್ತಿ ಒತ್ತಿ ಗಟ್ಟಿ ಮಾಡುತ್ತೇವೆ’

ಪ್ರತಿಭಾ ನಂದಕುಮಾರ್ ಅವರ ಬಹುಪ್ರಸಿದ್ಧ ಪದ್ಯವೊಂದು ಶುರುವಾಗುವುದು ಹೀಗೆ.

***

ಅವರು ರಜೆಯನ್ನು ಕಳೆಯಲಿಕ್ಕಾಗಿ ಮಗಳ ಮನೆಗೆ ಬಂದಿದ್ದಾರೆ. ಈ ರಜೆಯನ್ನು ತಾವಿಬ್ಬರೇ ಒಟ್ಟಿಗೆ ಕಳೆಯುವ ತಾಯಿ–ಮಗಳ ಪ್ಲ್ಯಾನು ಅಮ್ಮನ ಜೊತೆಗೇ ಬಂದ ತಂದೆಯಿಂದಾಗಿ ಭಗ್ನವಾಗಿದೆ. ಅವನು ಸ್ವಲ್ಪ ಕಿರಿಕಿರಿಯ, ಹೆಂಡತಿಯ ಮೇಲೆ ಅಧಿಕಾರ ಸ್ಥಾಪಿಸುವ ಮನುಷ್ಯ. ಹೆಚ್ಚೇನಲ್ಲ, ಬಹುತೇಕ ಎಲ್ಲ ಗಂಡಸರೂ ಎಷ್ಟಿರುತ್ತಾರೋ ಅಷ್ಟೇ!

ತಡರಾತ್ರಿ ಮಗಳು ಅಮ್ಮ ಮಲಗಿದ್ದ ಜಾಗದಲ್ಲಿ ನೋಡುತ್ತಾಳೆ. ಅವಳು ಅಲ್ಲಿಲ್ಲ; ಮನೆಯೆಲ್ಲ ಹುಡುಕುತ್ತಾಳೆ. ಒಂದು ಕಡೆಯಲ್ಲಿ ಅಮ್ಮ ಕೂತು ಅಳುತ್ತಿದ್ದಾಳೆ. ಕಣ್ಣೀರು ಒರೆಸಿಕೊಂಡ ಅವಳು ಹೇಳುವ ಮಾತು:

‘ನಂಗೆ ಸಾಧ್ಯ ಆಗ್ತಿಲ್ಲ... ನಾನು ತಿರುಗಿ ಊರಿಗೆ ಹೋಗುವುದಿಲ್ಲ. ನಿನ್ನಪ್ಪನ ಜೊತೆಗೆ ಬದುಕಲಾರೆ. ನಿನ್ನ ಜೊತೆ ಇಲ್ಲೇ ಇರಲಾ?’

‘ಅಮ್ಮಾ ಯಾಕೆ ಹೀಗೆಲ್ಲ ಮಾತಾಡ್ತಿದೀಯಾ? ಅಂಥದ್ದೇನಾಗಿದೆ ಈಗ?’

‘ಇಂಥದ್ದೇ ಅಂತ ಹೇಳೋಕೆ ಗೊತ್ತಾಗ್ತಿಲ್ಲ ಮಗಳೇ, ನಮ್ಮಿಬ್ಬರ ಮಧ್ಯೆ ಒಟ್ಟಿಗೆ ಬದುಕೋಕೆ ಕಷ್ಟ ಆಗ್ತಿರೋವಂಥದ್ದು ಏನೋ ಒಂದು’.

‘ಏನಮ್ಮಾ ನೀನು? ಅಪ್ಪ ಪರ್ಫೆಕ್ಟ್ ಅಲ್ಲ ನಿಜ, ಆದ್ರೆ ಯಾರು ಪರ್ಫೆಕ್ಟ್ ಇದಾರೆ? ನಾನು? ನೀನು? ಯಾರು? ಯಾರ ಮನೆಯಲ್ಲಿ ಇಂಥ ಸಣ್ಣ ಪುಟ್ಟ ಮನಸ್ತಾಪಗಳು ನಡೆಯೋದಿಲ್ಲ ಹೇಳು? ನಿಂಗೆ ಸುಸ್ತಾಗಿದೆ. ಮಲ್ಗು.. ನಾಳೆ ಬೆಳಿಗ್ಗೆ ಎಲ್ಲ ಸರಿಹೋಗತ್ತೆ’.

‘ಹಾ... ನೀನು ಹೇಳಿದ್ದು ನಿಜ. ನಂಗೆ ಸುಸ್ತಾಗಿದೆ. ನಾನ್ ಚೆನ್ನಾಗಿದೀನಿ. ಸರಿ. ನೀನು ಹೋಗು.’

**ಹೆಸರು:** ಎವರಿಥಿಂಗ್ ಈಸ್ ಫೈನ್
**ನಿರ್ಮಾಣ:** ಸಾಶಾ ಜಾನ್
**ನಿರ್ದೇಶನ:** ಮಾನಸ ನಿರ್ಮಲ್ ಜೈನ್
**ತಾರಾಗಣ:** ಸೀಮಾ ಭಾರ್ಗವ್, ಫಲೋಮಿ ಘೋಷ್, ಸಿದ್ಧಾರ್ಥ ಭಾರದ್ವಾಜ್
**ಛಾಯಾಗ್ರಹಣ:** ಜಿಗ್ಮೆ ಟಿ ಟೆಂಜಿಂಗ್
**ಸಂಕಲನ:** ಜಬೀನ್ ಮರ್ಚಂಟ್
**ಸಂಗೀತ:** ಸಾಗರ್ ದೇಸಾಯಿ

***

‘ಡಬ್ಬಿಯೊಳಗೆ ಹಿಟ್ಟುಒತ್ತಿದಂತೆ ಒತ್ತಿ ಒತ್ತಿ ಗಟ್ಟಿ ಮಾಡುತ್ತೇವೆ’ ಎಂಬ ಸಾಲುಗಳು ಸಿಡಿದಿದ್ದು ಇಂಥ ಮನಸ್ಥಿತಿಯ ಆಳದಿಂದಲೇ ಅಲ್ಲವೇ?

ಈ ಸಂಭಾಷಣೆ ಮಾನಸಿ ನಿರ್ಮಲ್ ಜೈನ್ ನಿರ್ದೇಶನದ ‘ಎವರಿಥಿಂಗ್ ಈಸ್ ಫೈನ್’ ಕಿರುಚಿತ್ರದ ಒಂದು ದೃಶ್ಯದ್ದು. ಇಲ್ಲಿನ ಅಮ್ಮನ ಮಾತುಗಳು ಪ್ರತಿಭಾ ಪದ್ಯವನ್ನು ದಟ್ಟವಾಗಿ ನೆನಪಿಸಿದರೆ ಮಗಳ ಮಾತುಗಳು, ಇತ್ತೀಚೆಗೆ ಬಿಡುಗಡೆಯಾದ ಹಿಂದಿಯ ‘ಥಪ್ಪಡ್’ ಸಿನಿಮಾದಲ್ಲಿ ಹೆಂಡತಿಯ ಕೆನ್ನೆಗೆ ಹೊಡೆದ ಗಂಡನನ್ನು ಸಮರ್ಥಿಸುವವರ ಮಾತುಗಳನ್ನು ನೆನಪಿಸುತ್ತದೆ. ಅಮ್ಮನ ಕೊನೆಯ ಮುಖಭಾವ ವಿನಯಾ ಒಕ್ಕುಂದ ಅವರ ‘ಎಲ್ಲ ಆರಾಮು’ ಎಂಬ ಕತೆಯನ್ನು ನೆನಪಿಸುತ್ತದೆ. ಈ ಎಲ್ಲವೂ ಒಂದೇ ತಂತುವಿನಲ್ಲಿ ಒಂದಕ್ಕೊಂದ ಆತುಕೊಂಡು ನಿಂತು ನಮ್ಮ ಮನಸಾಕ್ಷಿಯನ್ನು ಕೆದಕುತ್ತವೆ.

ಸಂಸಾರ ಎನ್ನುವುದು ಒಟ್ಟಾರೆ ಸಮಾಜದ ಕ್ಯಾನ್ವಾಸಿನಲ್ಲಿ, ಪರಿಕಲ್ಪನೆಯಲ್ಲಿ ಎಷ್ಟು ಸುಂದರ ಮತ್ತು ಗಟ್ಟಿಯಾದ ಘಟಕವೋ, ವಾಸ್ತವದಲ್ಲಿ ಅದಕ್ಕೆ ಅಷ್ಟೇ ಕ್ರೌರ್ಯದ ನಖಗಳಿವೆ. ಬಹುತೇಕ ಸಂದರ್ಭದಲ್ಲಿ ನಖಗಳ ಬೀಸಿಗೆ ಮೈ ಕೊಡುವುದು ಹೆಣ್ಣು. ನಮಗೇ ಗೊತ್ತಿಲ್ಲದೇ ನಾವೆಷ್ಟು ಕ್ರೂರ ವ್ಯವಸ್ಥೆಯನ್ನು ಕಟ್ಟಿಕೊಂಡಿದ್ದೇವೆಂದರೆ, ಆ ನಖದ ಬೀಸಿಗೆ ಚರ್ಮ ಹರಿದು ರಕ್ತತೊಟ್ಟಿಕ್ಕುತ್ತಿದ್ದರೂ ಹೇಳಿಕೊಳ್ಳುವ, ಪ್ರತಿಭಟಿಸುವ ಹಕ್ಕನ್ನೂ ಅವಳಿಂದ ಕಿತ್ತುಕೊಂಡಿದ್ದೇವೆ. ಬದಲಿಗೆ ಜಾಣತನದಿಂದ ‘ಮನೆ ಉಳಿಸುವ ತ್ಯಾಗಮಯಿ’ಯ ಸರಪಳಿಗಳಿಂದ ಅವಳನ್ನು ಹೆಡೆಮುರಿ ಕಟ್ಟಿ ದೇವಪೀಠದಲ್ಲಿ ಕೆಡವಿ ದೇವಿಯರನ್ನಾಗಿಸಿ ಪೂಜಿಸುತ್ತೇವೆ. ಮೈಗಾದ ಗಾಯ ಕಾಣಬಹುದು. ಮನಸ್ಸಿಗಾದ ಗಾಯ ಹೇಗೆ ಸಾಬೀತು ಮಾಡುವುದು?

ತನ್ನದಲ್ಲದ ಬದುಕನ್ನು ಬದುಕುತ್ತಿರುವ ಈ ಕಿರುಚಿತ್ರದಲ್ಲಿನ ತಾಯಿ, ಕೊನೆಗೆ ಒಂದು ದಿನ ಬೆಳ್ಳಂಬೆಳಿಗ್ಗೆ ಗಂಡ ಮಗಳು ಇಬ್ಬರಿಗೂ ಹೇಳದೆ ಪೇಟೆ ಸುತ್ತಲು ಹೊರಟುಬಿಡ್ತಾಳೆ. ತಾನಿಷ್ಟಪಟ್ಟಿದ್ದ ಚಪ್ಪಲಿ ಚೌಕಾಸಿ ಮಾಡಿ ತೆಗೆದುಕೊಳ್ತಾಳೆ; ಗಂಡನ ಸಿಗರೇಟು ತೆಗೆದುಕೊಂಡ ಸೇದುತ್ತಾಳೆ. ಟಾಂಗಾ ಗಾಡಿಯಲ್ಲಿ ಸುತ್ತುತ್ತಾಳೆ. ಮಗಳಿಗೆ ಫೋನ್ ಮಾಡಿ ಕರೆಸಿಕೊಂಡ ತನ್ನ ಬಹುದಿನದ ಕನಸಾದ ಬೋಟಿಂಗ್ ಮಾಡ್ತಾಳೆ. ಆಯಾ ಕ್ಷಣದ ಖುಷಿಯನ್ನು ತುಂಬಿಕೊಳ್ಳುತ್ತಲೇ, ಮತ್ತದೇ ಹಳೆಯ ಸಂಸಾರವೆಂಬ ಚೆನ್ನದ ಪಂಜರದಲ್ಲಿ ಬಂಧಿಯಾಗಲು ಸಜ್ಜಾಗುತ್ತಾಳೆ.

ಈ ತಾಯಿಯ ಅರೆಚಣದ ಧೈರ್ಯ, ಅದೃಷ್ಟ ಎಷ್ಟು ಜನ ಹೆಂಗಸರಿಗೆ ಸಿಕ್ಕೀತು ಹೇಳಿ?

ಪ್ರತಿಭಾ ಅವರ ಪದ್ಯ ಮುಗಿಯುವುದು ಹೀಗೆ:

ನಾಲ್ಕು ವರ್ಷಗಳಲ್ಲಿ ವಿಪರೀತ ದಪ್ಪಗಾಗಿ/ ಕೈಗೊಂದು ಕಾಲಿಗೊಂದು ಮಕ್ಕಳಾಗಿ/ ಏದುಸಿರು ಬಿಡುತ್ತಾ ತರಕಾರಿ ಕೊಳ್ಳುವಾಗ ‘ಅವನು’ ಸಿಗುತ್ತಾನೆ/ ನಮ್ಮ ಇಂದಿನ ಅವಸ್ಥೆಗೆ ಇವನೇ ಕಾರಣ/ ಅಂತ ರೋಷ ತಾಳುತ್ತೇವೆ/ ಆದರೆ ಮೇಲೆ ನಗು ನಗುತ್ತಾ ‘ಅವನ’/ ಹೆಂಡತಿ ಮಕ್ಕಳ ಯೋಗಕ್ಷೇಮ ವಿಚಾರಿಸುತ್ತೇವೆ/ ಯಾಕೆಂದರೆ ಅವಳದ್ದೂ ಅದೇ ಕಥೆಯಲ್ಲವೇ? /ನಾವು ಹುಡುಗಿಯರೇ ಹೀಗೆ...

ಈ ಕಿರುಚಿತ್ರ ವೀಕ್ಷಣೆಗೆ bit.ly/2BC7ohB ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.